ಮಾಡಿದ ಉಪಕರಣವನ್ನು ಉಪಯೋಗಿಸುತ್ತಾರೆ. ಇದರಲ್ಲಿ ಹೊಲಿಗೆ ಯಂತ್ರದ ಬಾಬಿನ್‌ನಂತೆ ಎರಡು ಭಾಗಗಳಿದ್ದು ಮಧ್ಯೆ ಒಂದು ಸಣ್ಣ ತುಂಡಿನಿಂದ ಸೇರಿರುತ್ತದೆ. ಶಟಲ್‌ನಲ್ಲಿ ದಾರವನ್ನು ಸುತ್ತಿಕೊಂಡು ಅದನ್ನು ಇನ್ನೊಂದು ದಾರದ ಮೇಲೆ ಕೆಳಗೆ ಆಡಿಸುವುದರಿಂದ ಟ್ಯಾಟಿಂಗ್ ಹೊಲಿಗೆ ಹಾಕಲಾಗುತ್ತದೆ. ಕಣ್ಣಿನ ಆಕಾರವು ಸುತ್ತಿದ ದಾರದ ಒಳ ಹೊರಗಿನ ಓಡಾಟಕ್ಕೆ ಪೂರಕವಾಗುತ್ತದೆ. ಈ ಶಟಲ್‌ನ ಕೊನೆಗೆ ಒಂದು ಸಣ್ಣ ಕೊಕ್ಕೆ ಇರುತ್ತದೆ. ಇದರ ಸಹಾಯದಿಂದ ದಾರವನ್ನು ಎಳೆದುಕೊಳ್ಳಲು ಸಹಾಯವಾಗುತ್ತದೆ. ಇಲ್ಲದಿದ್ದರೆ ಒಂದು ಕ್ರೋಶ ಹುಕ್ ಅನ್ನು ಇದಕ್ಕಾಗಿ ಉಪಯೋಗಿಸುತ್ತಾರೆ.

ಈ ಟ್ಯಾಟಿಂಗ್ ಹೊಲಿಗೆ ಗಣಿತದ ಪೈ ಆಕಾರದಲ್ಲಿ ಇರುತ್ತದೆ. ಕೆಳಗೆ ಎರಡು ದಾರ ಅದನ್ನು ಸೇರಿಸಿದಂತೆ ಮೇಲೆ ಒಂದು ದಾರ. ಇದು ಹಾಕಲು ಒಂದು ಹೊಲಿಗೆಗೆ ಎರಡು ಸಲ ಹೊಲಿಯಬೇಕು. ಹಾಗಾಗಿ ಒಂದು ವಿನ್ಯಾಸದಲ್ಲಿ 100 ಹೊಲಿಗೆ ಇದ್ದರೆ ಅದನ್ನು ಹಾಕಲು 200 ಸಲ ಶಟಲ್ ಅನ್ನು ತಿರುಗಿಸಬೇಕು. ಇದರಲ್ಲಿ ಪ್ರಮುಖವಾಗಿ ಎರಡು ರೀತಿ. ಒಂದು ವೃತ್ತ (ಸರ್ಕಲ್) ಒಂದು ಬಳ್ಳಿ (ಚೈನ್). ಅದೇ ಹೊಲಿಗೆ ಹಾಕಿ ಎಲ್ಲಾ ವಿನ್ಯಾಸಗಳನ್ನು ಮಾಡಲಾಗುತ್ತದೆ. ವೃತ್ತ ಮಾಡಲು ಹಾಕಿದ ಹೊಲಿಗೆಗಳನ್ನು ಹತ್ತಿರಕ್ಕೆ ಎಳೆಯಬೇಕು. ಇದನ್ನು ಮತ್ತೆ ತೆಗೆಯುವುದು ಕಷ್ಟ. ಬಳ್ಳಿಯಲ್ಲಿ ಹೊಲಿಗೆಯು ಹತ್ತಿರಕ್ಕೆ ಸೇರಿದರೂ ಪೂರ್ತಿ ಹತ್ತಿರ ಬರುವುದಿಲ್ಲ.

ಇದರ ಒಂದು ವಿಶೇಷವೆಂದರೆ ಹೊಲಿಗೆಗಳು ದಾರದ ಮೇಲೆ ಪೋಣಿಸಿದ ರೀತಿ ಇರುತ್ತದೆ. ಹಿಂದೆ ಮುಂದೆ ಸರಿಯುತ್ತದೆ. ಈ ರೀತಿ ಸರಿದರೆ ಹೊಲಿಗೆ ಸರಿಯಾಗಿದೆ, ಇಲ್ಲದಿದ್ದರೆ ಸರಿಯಿಲ್ಲ! ಈ ಹೊಲಿಗೆಯ ಮಧ್ಯೆ ಸಣ್ಣ ಒಂದು ದಾರದ ಕೊಂಡಿಯನ್ನು ಬಿಡಲಾಗುತ್ತದೆ. ಇದಕ್ಕೆ ಪಿಕಾಟ್ ಅಥವಾ ಪೀಕೊ ಎನ್ನುತ್ತಾರೆ. ಇದು ಅಲಂಕಾರಿಕವಾಗಿಯೂ ಉಪಯೋಗವಾಗುತ್ತದೆ, ಮತ್ತು ಒಂದು ರಿಂಗ್ ಅನ್ನು ಇನ್ನೊಂದಕ್ಕೆ ಸೇರಿಸಲು ಸಹ ಉಪಯೋಗ ಆಗುತ್ತದೆ. ವೃತ್ತ ಮತ್ತು ಬಳ್ಳಿಯನ್ನು ಸೇರಿಸಿ ಮಾಡಿದ ಡಿಸೈನ್ 15" ಅಥವಾ ಅದಕ್ಕಿಂತ ದೊಡ್ಡದಾಗಿ ಮಾಡುತ್ತಾರೆ.

ಶಟಲ್ ಕೂಡ ಒಂದು ರೀತಿಯ ಕಲೆಯೇ ಆಗಿದೆ. ಇದನ್ನು ಪ್ಲಾಸ್ಟಿಕ್, ಬೆಳ್ಳಿ, ಮರ, ದಂತ, ಅಲ್ಲದೆ ಬೇರೆ ಬೇರೆ ಲೋಹಗಳಿಂದಲೂ ಮಾಡುತ್ತಾರೆ. ಅವುಗಳನ್ನು ಅದರ ಉಪಯೋಗದಂತೆ ಅತಿ ಚಿಕ್ಕಂದಿರಿಂದ ದೊಡ್ಡದರವರೆಗೆ ಮಾಡುತ್ತಾರೆ. ಶಟಲ್‌ಗೆ ಬಣ್ಣಗಳು, ಕೆತ್ತನೆ, ಡೆಕೊಪೇಜ್‌ನ ಅಲಂಕಾರ ಎಲ್ಲಾ ರೀತಿಯೂ ಮಾಡುತ್ತಾರೆ. ಈಗ ಹೊಸ ಆವಿಷ್ಕಾರವಾದ ತ್ರಿಡಿ ಪ್ರಿಂಟಿಂಗ್‌ನಲ್ಲಿ ಸಹ ಶಟಲ್ ಮಾಡುತ್ತಾರೆ. ಮೌಲ್ಯದ ಪ್ರಕಾರ ಶಟಲ್‌ನ ಬೆಲೆಯೂ ಹೆಚ್ಚಾಗುತ್ತದೆ.

ದಾರಗಳಲ್ಲೂ ವಿವಿಧ ರೀತಿ ಇದೆ. ಅತಿ ಸಣ್ಣ ದಾರದಿಂದ ದಪ್ಪನೆಯ ದಾರದ ತನಕ ವಿನ್ಯಾಸಕ್ಕೆ ತಕ್ಕಂತೆ ದಾರವನ್ನು ಆರಿಸಿಕೊಳ್ಳುತ್ತಾರೆ. ಚಿನ್ನದ ಬಣ್ಣದ ದಾರವನ್ನು ಬೇರೆ ಬಣ್ಣದ ದಾರದ ಜೊತೆ ಸೇರಿಸಿ ಹೊಳೆಯುವ ದಾರ ಮಾಡುತ್ತಾರೆ. ಒಂದೇ ದಾರದಲ್ಲಿ ಬೇರೆ ಬೇರೆ ಬಣ್ಣ ಹಾಕಿದ ಬಣ್ಣ ಬಣ್ಣದ ದಾರ ಕೂಡ ಸಿಗುತ್ತದೆ. ಹೀಗೆ ಒಂದೇ ವಿನ್ಯಾಸವನ್ನು ಬೇರೆ ರೀತಿ ಕಾಣುವಂತೆ ಬೇರೆ ಬೇರೆ ದಾರಗಳನ್ನು ಉಪಯೋಗಿಸಿ ಮಾಡಬಹುದು.

ಟ್ಯಾಟಿಂಗ್ ಅನ್ನು ನಮ್ಮ ಕಲ್ಪನೆಗೆ ಬಂದ ಹಾಗೆ ಯಾವುದಕ್ಕೆ ಬೇಕಾದರೂ ಸೇರಿಸಿ ಅದರ ಅಂದ ಚೆಂದವನ್ನು ಹೆಚ್ಚಿಸಬಹುದು. ನಮ್ಮ ದೇಶದ ಕಲೆ ಅಲ್ಲದಿದ್ದರೂ ನಮ್ಮ ಸಂಸ್ಕೃತಿಗೆ ಅಳವಡಿಸಿಕೊಂಡು ಆನಂದಿಸೋಣ.



## ಅಲಂಕಾರಕ್ಕಾಗಿ...

ಟ್ಯಾಟಿಂಗ್ ಬಟ್ಟೆಯ ಅಲಂಕಾರಕ್ಕೆ ಉಪಯುಕ್ತ. ಕತ್ತಿನ ಹತ್ತಿರ ಮತ್ತು ಕೈಗೆ ಲೇಸ್‌ನಂತೆ ಇರುವ ಇದನ್ನು ಇಟ್ಟು ಹೊಲಿದುಕೊಂಡರೆ ಬಟ್ಟೆಯ ಅಂದ ದ್ವಿಗುಣವಾಗುತ್ತದೆ. ಸೀರೆಯ ಅಂಚಿಗೆ, ಸೆರಗಿಗೂ ಹೊಲಿಯಬಹುದು. ಸೆರಗಿನ ಅಂಚಿಗಿಟ್ಟು ಕುಚ್ಚು ಮಾಡಬಹುದು.

ಅಲ್ಲದೆ ಮೇಜಿನ ಮೇಲೆ, ಟೀವಿ ಮೇಲೆ ಹಾಕುವ ಬಟ್ಟೆಯ ಅಂಚಿಗೆ ಸೇರಿಸಬಹುದು. ಮೇಜಿನ ಮಧ್ಯ ಭಾಗದಲ್ಲಿ ಇಡುವ 'ಡಾಲಿ'ಗಳನ್ನು ಮಾಡಬಹುದು. ದಾರವು ಮೆತ್ತಗಿರುವುದರಿಂದ ಅದನ್ನು ಸ್ಟಾರ್ಚ್ ಹಾಕಿ ಗಟ್ಟಿಯಾಗಿ ಮಾಡಿ ಸರ, ಬಳೆ, ಓಲೆ ಎಲ್ಲಾ ಮಾಡಬಹುದು. ಟ್ಯಾಟಿಂಗ್ ದಾರದಲ್ಲಿ ಮಣಿಗಳನ್ನು ಸೇರಿಸಿದರೆ ಅದು ಬಹಳ ಸುಂದರವಾಗಿ ಕಾಣುತ್ತದೆ.

ಡೈನಿಂಗ್ ಟೇಬಲ್ ಮೇಲೆ ಐಸ್‌ಕ್ರೀಮ್ ಕಪ್ ಇಟ್ಟಾಗ ಅದರ ತಳಭಾಗದಲ್ಲಿ ಟ್ಯಾಟಿಂಗ್ ಮಾಡಿದ ಬಟ್ಟೆಯನ್ನು ಇಟ್ಟರೆ ಅಲಂಕಾರಿಕವಾಗಿ ಕಾಣುತ್ತದೆ.

